ಕಾರಣವೂ ಉಂಟು. ಒಂದು ಕಾಲಕ್ಕೆ ಶಾರದೆಯ ಅಜ್ಜ ಹೊಸಕೊಪ್ಪ ಗ್ರಾಮಕ್ಕೆಲ್ಲ ಬಹಳ ಹೆಸರುವಾಸಿ ಸಾಹುಕಾರರು. ಅವರ ಹದಿನೆಂಟು ಅಂಕಣದ ಮನೆ ಸುತ್ತಮುತ್ತ ಕೊಪ್ಪ ತಾಲ್ಲೂಕಿನಲ್ಲಿ ಎಲ್ಲಿಯೂ ಇರಲಿಲ್ಲ. ಮಧ್ಯದಲ್ಲೊಂದು ವಿಶಾಲ ಅಂಗಳ, ಅದರ ಸುತ್ತ ಬೀಟೆ, ಸಾಗುವಾನಿ ಮರಗಳ ಚಚೌಕ ಆಕಾರದ ಕಂಬಗಳು, ಹತ್ತಾರು ತೊಲೆಗಳ, ದೊಡ್ಡ ಪಡಸಾಲೆ. ದೊಡ್ಡ ಪಣ್ತ, ಬಂಗಾರ ತುಂಬಿಡುವ ಹತ್ತಾರು ಪಿಟಾರಿಗಳು ಹೀಗೆ ಆ ಕಾಲದ ಶ್ರೀಮಂತಿಕೆಯ ಗತ್ತಿನ ಸಕಲ ಸೌಕರ್ಯಗಳೂ ಆ ಮನೆಯಲ್ಲಿದ್ದವು. ಅದಕ್ಕೆ ಕಾರಣವೂ ಇತ್ತು. ಶಾರದೆಯ ಅಜ್ಜನ ಅಪ್ಪ ಮೈಸೂರು ಮಹಾರಾಜರ ರಾಜಪುರೋಹಿತರಾಗಿದ್ದರಂತೆ. ಆಗಿನ ರಾಜರು ಇವರ ರಾಜನಿಷ್ಠೆ ಮತ್ತು ಬುದ್ಧಿವಂತಿಕೆಯನ್ನು ಮೆಚ್ಚಿ ಹೊಸಕೊಪ್ಪ ಗ್ರಾಮವನ್ನು ಇವರಿಗೆ ದಾನ ನೀಡಿದರಂತೆ. ತೀರಾ ದಯಾಳುವಾಗಿದ್ದ ಆಕೆಯ ಮುತ್ತಜ್ಜ ತನಗೆ ಎಷ್ಟು ಬೇಕೋ ಅಷ್ಟು ಜಮೀನನ್ನು ಬಳಿ ಇಟ್ಟುಕೊಂಡು ಉಳಿದಿದ್ದನ್ನು ತನ್ನ ಸನಿಹದ ಸಂಬಂಧಿಕರಿಗೆ ಮತ್ತು ಜಮೀನು ಇಲ್ಲದೆ ನಾಲ್ಕಾಣೆ ಪುರೋಹಿತಿಗೆ ಮಾಡುತ್ತಿದ್ದ ತನ್ನವರಿಗೆ ಹಂಚಿಬಿಟ್ಟರಂತೆ.

ಅವರ ನಂತರ ಮನೆಯ ಯಜಮಾನಿಕೆ ವಹಿಸಿಕೊಂಡ ಶಾರದೆಯ ಅಜ್ಜನೂ ದಾನ ಧರ್ಮದಲ್ಲಿ ಒಂದು ಚೂರು ಹಿಂದೆ ಮುಂದೆ ನೋಡದೆ ಹಿರಿಯರ ಹೆಗ್ಗಳಿಕೆಯನ್ನು ಉಳಿಸಿಕೊಳ್ಳುತ್ತಲೇ ಬಂದವರು. ಅವರ ಮನೆಯಲ್ಲಿ ಪ್ರತಿನಿತ್ಯವೂ ಐವತ್ತರಿಂದ ನೂರು ಜನರಿಗೆ ಊಟದ ಸಂತರ್ಪಣೆ ನಡೆಯುತ್ತಿತ್ತು. ಹೊಸಕೊಪ್ಪ ಗ್ರಾಮಕ್ಕೆ ಅಡಿಕೆ ಸಂಭಾವನೆಗೆಂದು ಬರುವ ಗೋಕರ್ಣದ ಭಟ್ಟರಿಂದ ಹಿಡಿದು, ಯಾವ್ಯಾವುದೋ ಮನೆಯಿಂದ ಹೊರದೂಡಲ್ಪಟ್ಟ ಬಾಲವಿಧವೆಯರು, ಮುದುಕರು, ಮುದುಕಿಯರು ಮುಂತಾದವರು ಆ ಮನೆಯಲ್ಲಿ ಬಂದು ಉಳಿದುಕೊಳ್ಳುತ್ತಿದ್ದರು. ಹಾಗೆ ಉಳಿದುಕೊಂಡ ಕೆಲವರು ಕೆಲದಿನಗಳ ನಂತರ ತಮ್ಮ ನೆಲೆ ಅರಸಿ ಹೋದರೆ ಇನ್ನು ಕೆಲವರು ಕಾಯಂ ಆಗಿ ಅಲ್ಲಿಯೇ ಉಳಿದುಬಿಡುತ್ತಿದ್ದರು. ದಿನ ಕಳೆದ ಹಾಗೆ ಅವರಿಗೆ ಒಂದೊಂದು ನೆಂಟಸ್ತಿಕೆಯ ಹೆಸರೂ ದಕ್ಕಿ ಹೋಗುತ್ತಿತ್ತು. 'ಚಿಕ್ಕಿ, ದೊಡ್ಡ, ಅತ್ತೆ, ಕಾಕಿ, ತೇತೆ, ಕಕ್ಕ, ಚಿಕ್ಕು' ಹೀಗೆ... ಹಾಗೆ ತಳ ಊರಿದವಳು ಪೈಕಿ ಭಾಗೀಚಿಕ್ಕಿಯೂ ಒಬ್ಬಳು. ಆಕೆ ಬಂದದ್ದು ಎಲ್ಲಿಂದಾಗಲಿ, ಅವಳು ಯಾರೆಂದಾಗಲಿ ಯಾರೊಬ್ಬರಿಗೂ ಗೊತ್ತಿರಲಿಲ್ಲ. ಕೇಳುವ ಪರಿಪಾಟವನ್ನು ಆ ಮನೆಯ ಸದಸ್ಯರು ಪಾಲಿಸಿಕೊಂಡು ಬಂದಿರಲಿಲ್ಲ. ಆದರೆ ಅವಳ ಬೋಳು ಹಣೆ ಮತ್ತು ಬರಿಗೈ ನೋಡಿದ ಎಲ್ಲರಿಗೂ ಆಕೆ ಸ್ಥಿತಿ ಏನೆಂದು ಅರಿವಿಗೆ ಬಂದು ಸುಮ್ಮನಾಗಿದ್ದರು.

ಭಾಗೀರಥಿ ಅವಳ ಪೂರ್ಣ ಹೆಸರಾದರೂ ಹೊಸ ಮನೆಗೆ ಬಂದು ಹೊಸಬರ ಜೊತೆಯ ಲೀನವಾದ ಕ್ಷಣಕ್ಕೆ ಸಾಕ್ಷಿ ಎನ್ನುವಂತೆ ಅವಳ ಹೆಸರೂ ಕೂಡ ಹೊಸದೇ ಆಗಿ ಹೊಸ ಬದುಕೊಂದನ್ನು ತೆರೆದು ನಿಂತು ಸ್ವಾಗತಿಸಿತ್ತು. ಐದು ಅಡಿ ನಾಲ್ಕು ಇಂಚು ಎತ್ತರದ ಸದೃಢ ಮೈಕಟ್ಟಿನ ಆಕೆ ದೈತ್ಯ ಯಂತ್ರದಂತೆ ಹಗಲೂ ಮೂರು ಹೊತ್ತು ಏನಾದರೊಂದು ಕೆಲಸ ಮಾಡುತ್ತಲೇ ಇರುತ್ತಿದ್ದಳು. ಒಂದು ದಿನವೂ ಮನೆಯವರ ಜೊತೆ ಕೂತು ಉಂಡಿದ್ದನ್ನು ಅಲ್ಲಿನ ಯಾರೊಬ್ಬರೂ ಕಂಡಿರಲಿಲ್ಲ. ಮೊದಮೊದಲಿಗೆ ಸಂಕೋಚದಿಂದ ಮುದುಡಿ ಕೊನೆಗೆ ಎಲ್ಲರ ಊಟ ಮುಗಿದ ಮೇಲೆ ಮೂಲೆಯಲ್ಲಿ ಕೂತು ಊಟ ಮಾಡುತ್ತಿದ್ದವಳು, ಕೊನೆಗೆ ಅದು ತನ್ನ ಹಕ್ಕು ಎನ್ನುವಂತೆ ಕೊನೆಗೆ ಊಟ ಮಾಡುತ್ತಿದ್ದಳು. ತನ್ನದೇ ಮನೆಯೇನೋ ಎಂಬ ಜಬರುದಸ್ತಿನಲ್ಲಿ ಅಡಿಗೆಯ ಉಸ್ತುವಾರಿಯಿಂದ ಹಿಡಿದು, ದನ, ಕರು, ಕೊಟ್ಟಿಗೆ, ಕಳೆ ಕೀಳೋದು, ಗೊಬ್ಬರದ ರಾಶಿಗೆ ದರಗು ಹಾಕಿಸೋದು ಹೀಗೆ ನೂರೆಂಟು ಕಾರ್ಯಗಳ